ಶ್ರೀ ಎ. ಜಿ. ಕೊಡಗಿ.— ತಾವು ಕೊಟ್ಟಿರುವ ಸ್ಟೇಟ್‌ಮೆಂಟ್ (1)ರಲ್ಲಿ ದಕ್ಷಿಣ ಕನ್ನಡಜಿಲ್ಲೆ ಉತ್ಪಾದನೆ ಬಹಳ ಕೊರತೆ ಪ್ರದೇಶ ಎಂದು ಒಪ್ಪಿಕೊಳ್ಳುತ್ತೀರಿ, ಅಲ್ಲಯ ಉತ್ಪಾದನೆ ಅರು ತಿಂಗಳಿಗೂ ಸಾಕಾಗುವುದಿಲ್ಲ ಎಂದು ನನ್ನ ಅಭಿಪ್ರಾಯ, ತಾವು ಏನು ಹೇಳುತ್ತೀರಿ?

ಶ್ರೀಮತಿ ಇ. ಇ. ವಾಜ್.— ಈ ವರ್ಷ ಅಷ್ಟೊಂದು ಕೊರತೆ ಆಗಿಲ್ಲ ಎಂದು ಅಧಿಕಾರಿಗಳ ರಿಪೋರ್ಟ್ ಮುಖಾಂತರ ನಮಗೆ ಗೊತ್ತಾಗುತ್ತದೆ.

ಶ್ರೀ ಎ. ಜಿ. ಕೊಡಗಿ.— ತಾವು ಸ್ಟೇಟ್‌ಮೆಂಟ್ 3ರಲ್ಲಿ ಮಾರ್ಕೆಟ್ ಧಾರಣೆ ವಿಚಾರವಾಗಿ ಕೊಟ್ಟಿರುವ ಅಂಕಿಅಂಶದ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯೂ, ಎಲ್ಲಾ ಜಿಲ್ಲೆಗಿಂತಲೂ ಪ್ರತಿ ತಿಂಗಳು 15-1-1974ರಂದ 31-7-1974ರ ವರೆಗೆ ಕ್ವಿಂಟಾಲಿಗೆ ಹೆಚ್ಚು ಕಡಿಮೆ 100 ರೂಪಾಯಿ ವ್ಯತ್ಯಾಸ ಕಾಣುತ್ತಿದೆ, ಇದಕ್ಕೆ ಸರ್ಕಾರದ ಒಂದು ಅವ್ಯವಹಾರಿಕ ಧೋರಣೆಯೇ ಕಾರಣ. ಈ ಧೋರಣೆಯನ್ನು ತಾವು ಶೀಘ್ರವಾಗಿ ಬದಲಾಯಿಸಿ ದಕ್ಷಿಣ ಕನ್ನಡ ಜನರಿಗೂ ಕೂಡ ಯೋಗ್ಯ ಬೆಲೆಗೆ ಆಹಾರ ಧಾನ್ಯ ದೊರಕುವಂತೆ ಪ್ರಯತ್ನ ಮಾಡುತ್ತೀರಾ?

ಶ್ರೀಮತಿ ಇ. ಇ. ವಾಜ್.— ನಾನು ಹೇಳಿದ ಪ್ರಕಾರ ಅಷ್ಟೊಂದು ವ್ಯತ್ಯಾಸ ಕಾಣುತ್ತಿಲ್ಲ. ಸಾಮಾನ್ಯವಾಗಿ ಒರಟು ಧಾನ್ಯಕ್ಕೆ ಚಿಕ್ಕಮಗಳೂರು, ಕೊಡಗು ಎಲ್ಲಾ ಒಂದೇ ತರಹ ಇದೆ. ಶಿವಮೊಗ್ಗದಲ್ಲ ರೂ. 1-95 ಇರುವ ಅಕ್ಕಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡೂ ಚಿಲ್ಲರೆ ರೂಪಾಯಿ ಇರಬಹುದು.

ಶ್ರೀ ಎ ಜಿ. ಕೊಡಗಿ. — ಈಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನುಮಾರು ಕ್ವಿಂಟಾಲಿಗೆ 50 ರೂಪಾಯಿಯಿಂದ 100 ರೂಪಾಯಿಯವರೆಗೆ ಬೆಲೆ ಹೆಚ್ಚಿದೆ. ಈ ಅವ್ಯವಹಾರಕ್ಕೆ ಸರ್ಕಾರದ ಧೋರಣೆಯೇ ಕಾರಣ ಆದ್ದರಿಂದ ಇನ್ನು ಮುಂದೆಯಾದರೂ ಬೇರೆ ಜಿಲ್ಲೆಗಳಲ್ಲಿ ಅಹಾರಧಾನ್ಯ ದೊರಕುವಂತೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಆಹಾರ ಧಾನ್ಯ ದೊರಕುವಂತೆ ಏರ್ಪಾಡು ಮಾಡುತ್ತೀರಾ?

ಶ್ರೀಮತಿ ಇ. ಇ. ವಾಜ್.— ಅಷ್ಟೊಂದು ವ್ಯತ್ಯಾಸ ಇದೆ ಎಂದು ಹೇಳಿದರೆ ನಾನು ಒಪ್ಪುವುದಿಲ್ಲ. ಶಿವಮೊಗ್ಗ ಜಿಲ್ಲೆ ಸದಸ್ಯರು ಇಲ್ಲೇ ಇದ್ದಾರೆ ಅವರು ಹೊರಗೆ ಬಡಬಾರದು ಹಾಗೆ ಹೇಳುತ್ತಿದ್ದಾರೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲ ಹೆಚ್ಚು ಧಾನ್ಯ ಒದಗಿಸಲಾಗಿದೆ 9 ಸಾವಿರ ಕ್ವಿಂಟಾಲ್ ಅಕ್ಕಿ, 8 ಸಾವಿರ ಕ್ವಿಂಟಾಲ್ ಗೋಧಿಯನ್ನು ಎಷ್ಟರಮಟ್ಟಿಗೆ ಸಾಧ್ಯ ಇದೆ ಅಷ್ಟನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಒದಗಿಸಿ ಅವರ ಬೆಲೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು ಮಾಡುತ್ತಿದ್ದೇವೆ. ಅಲ್ಲದೆ ಶಿವಮೊಗ್ಗದಲ್ಲ ಸ್ವಲ್ಪ ಕಡಿಮೆ ಎಂದು ಕಂಡುಬಂದರೆ ಅಲ್ಲಿ ಬೆಳೆ ಜಾಸ್ತಿ ಬರುತ್ತದೆ. ಹೆಚ್ಚು ಬೆಳೆ ಬಂದಲ್ಲಿ ಬೆಲೆ ಕಡಿಮೆ ಇರುತ್ತದೆ.

ಶ್ರೀ ಯು. ಟಿ. ಫರೀದ್.— ೨೬ಲ್ಲ ಕ್ವಿಂಟಾಲ್ ಬೆಲೆ ಹೇಗಿದೆ? ಈಗಿನ ಪ್ರಸಕ್ತ ಕ್ರಯ ಎಷ್ಟು?

ಶ್ರೀಮತಿ ಇ. ಇ. ವಾಜ್. — ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ವಿಂಟಾಲ್ ಇರುವುದಿಲ್ಲ, ಅಲ್ಲಿ ಮುಡ್ಡಿ ಲೆಕ್ಕದಲ್ಲಿ ಕೊಡುತ್ತಾರೆ. ಅದು 95 ರೂಪಾಯಿಂದ 100 ರೂಪಾಯಿವರೆಗೆ ಇದೆ. ಎಲ್ಲಾ ಜಿಲ್ಲೆಗಳಲ್ಲೂ ಅದೇ ಕ್ರಯ ಇದೆ.

Communication Roads in Villages of Savanur and Shirahatti Taluks

297 Sri V. V. WAI (Shirahatti).—

Will the Minister for Public Works be pleased to state:—

(*a*) whether it has come to the notice of the Government that a bridge is being constructed to Varada river near Hosaritti;

(*b*) if so, the reasons for the slow progress of the said work;

(*c*) whether it has come to the notice of the Government that there is no communication to the Villages of Savanur and Shirahatti Taluks even though the bride was constructed spending lakhs of rupees;

(*d*) whether the Government has proposed to construct communication roads atleast in future?

Sri H. M. CHANNABASAPPA (Minister for Public Works).—

(*a*) Yes.

b Due to contractual difficulties.

(*c*) Yes.

(*d*) This will be examined.

ಶ್ರೀ ಬಿ. ಜಿ. ಬಣಕಾರ್.— ಯಾವ ವರ್ಷದಲ್ಲಿ ಎಷ್ಟು ಕೆಲಸ ಆಗಿದೆ? ಇದಕ್ಕೆ ಅಂದಾಜು ರೊಕ್ಕ ಎಷ್ಟು, ಮತ್ತು ಖರ್ಚಾಗಿರುವ ರೊಕ್ಕ ಎಷ್ಟು? ಆದಷ್ಟು ತೀವ್ರವಾಗಿ ಇದನ್ನು ಮುಗಿಸಲಕ್ಕೆ ಬಂದಂಥ ತೊಂದರೆ ಏನು?

† ಶ್ರೀ ಎಚ್. ಎಂ. ಚನ್ನಬಸಪ್ಪ.—1964 ರಲ್ಲಿ ಈ ಕೆಲಸವನ್ನು ಚೆಂಡರ್‌ಮಾಡಿ ಕಂಟ್ರಾಕ್ಟರಿಗೆ ಕೊಡಲಾಯಿತು. ಈ ಕೆಲಸವನ್ನು ಕೆಲವು ಕಾಲ ನಡೆಸಿ ಆ ಕಂಟ್ರಾಕ್ಟರು ಕೈಬಿಟ್ಟಿದ್ದರಿಂದ ಈ ವರೆಗೆ ಸ್ವಲ್ಪ ನಿಧಾನವಾಯಿತು. ಆ ಕಂಟ್ರಾಕ್ಟರನ್ನು ಕ್ಯಾನ್ಸಲ್‌ಮಾಡಿ ಬೇರೆ ಕಂಟ್ರಾಕ್ಟರಿಗೆ ಈ ಕೆಲಸವನ್ನು ವಹಿಸುವ ಸಂಭವ ಬಂತು. ಆದುದರಿಂದ ಈ ಕೆಲಸ ನಿಧಾನವಾಗಿರುವುದು ಸತ್ಯ. ಈ ಕೆಲಸವನ್ನು ಪುನಃ ಆರಂಭಿಸಿ, ಕೆಲಸ ಪೂರ್ತಿಆಬೇಕು ಎನ್ನುತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ, ಈಗ ಪೂರ್ತಿಸಿ ಕೊಡುತ್ತೇವೆ.

ಶ್ರೀ ಬಿ. ಜಿ. ಬಣಕಾರ್.— ಈಗಾಗಲೇ ಎಷ್ಟು ಹಣ ಖರ್ಚಾಗಿದೆ, ಇನ್ನೊಂದು ವರ್ಷದೊಳಗೆ ಮುಗಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಈಗ 7 ಲಕ್ಷದ 1 ಸಾವಿರ ರೂಪಾಯಿ ಕೆಲಸ ಆಗಿದೆ. ಇನ್ನು ಉಳಿದಿರತಕ್ಕ ಕೆಲಸ 2 ಲಕ್ಷದ 49 ಸಾವಿರ ರೂಪಾಯಿನದು. ವ್ಯತ್ಯಾಸ ಹೆಚ್ಚುಕಡಿಮೆ ಆಗಿರಬಹುದು.

Allotment of Nitrogenous Fertilisers

305 Sri H. D. DEVE GOWDA (Holenarasipura).—

Will the Minister for Agriculture and Animal Husbandry be pleased to state:

(*a*) whether it is a fact that Government has issued intstructions to the Director of Agriculture to make direct allotment of Nitrogenous fertilisers to the individual farmers and to the Primary Co-operative Societies during the years 1972–73 and 1973–74;

(*b*) if so, the quantum of fertilisers so allotted in the following *pro forma* ?

Name of the individual farmer and his address	Name of the Primary Co-operative Society	The quantum of fertilisers, nitrogenous and other complex fertiliser	Date of allotment

Sri N CHIKKE GOWDA (Minister for Agriculture and Animal Husbandry)—

(*a*) Yes.

(*b*) Statement is placed on the Table of the House

** Copy placed in the Karnataka Legislature Library *vide* No. 16 dated 20-2-1975.